ಪಟ್ಟು ಹಾಗೆ ಸಾಲವನ್ನು ಕೊಟ್ಟಾಗ ಎಷ್ಟು ಬಡ್ಡಿ ಇರಬೇಕು ಎಂಬುದರ ಬಗ್ಗೆ ಆರ್.ಬಿ.ಐ. ನವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಅದಕ್ಕಿಂತ ಜಾಸ್ತಿ ಇರಬಾರದು ಎನ್ನತಕ್ಕಂತಹ ಮಾತು ಬಂತು. ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಬದಲಾವಣೆಯಾಗಿರತಕ್ಕಂಥದ್ದು ಇಷ್ಟೆ. ಅದನ್ನು ಓದಿಬಿಡುತ್ತೇನೆ ' for the words, " prescribed rate, in the two place where it occurs, the words " agreed rate within the limits prescribed by the Reserve Bank of Inia and other Government Financing or Refinancing institutions from time to time " shall be substituted " ಇದು ಮೊದಲೇ ಸೇರಿಕೊಂಡಿತ್ತು. ಅಂತರಗತವಾಗಿತ್ತು. ಸಾಲವನ್ನು ಕೊಡತಕ್ಕಂತಹ ಸಂಸ್ಥೆಗಳು ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿರತಕ್ಕ ಬಡ್ಡಿ ರೇಟಿಗಿಂತ ಜಾಸ್ತಿ ಮಾಡುವ ಹಾಗೆ ಇಲ್ಲ, ಜಾಸ್ತಿ ತೆಗೆದುಕೊಳ್ಳುವ ಹಾಗೂ ಇಲ್ಲ. ಇದನ್ನು ಎಕ್ಸ್‌ಪ್ಲೇನ್ ಮಾಡಿದ್ದೇನೆ. ಇದರಲ್ಲಿ ಹೊಸ ವಿಚಾರ ಯಾವುದೂ ಇಲ್ಲ. ಆದರಿಂದ ಇದಕ್ಕೆ ಮಾನ್ಯ ಸಭೆಯು ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEKER.—I will now put the consideration motion to the vote of the House the question is a that Amendment adopted to clause 2 of Karnataka public Moneys(Recovery of dues)(Amendment Bill 1985 as required under rule 110 of rules of procedure and conduct of business in the legislative Assembly be taken in to consideration.

Motion was adopted and the Amendment was agreed to

THE KARNATAKA LEGISLATURE SALARIES, PENSIONS AND ALLOWANCES(THIRD AMENDMENT)BILL, 1985.

MOTION TO CONSIDER

SRI A. LASHMI SAGAR.(MINISTER FOR LAW, PARLIMENTARY AFFAIRS AND URBAN DEVELOMENT).—Sir, I beg to move:

> " That the Karnataka Legislature Salaries, pensions and Allowances(Third Amendment)Bill, 1985 be taken into consideration. "

The Question was proposed.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ೨-೩ ಅಂಶಗಳು ಇವೆ. ಮೊದಲನೆಯದು ಸನ್ಮಾನ್ಯ ಸದಸ್ಯರಿಗೆ ಈ ಸಂಬಳದ ಮುಖಾಂತರ ೭೦೦-೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮತ್ತೆ ಅಲೋಯನ್ಸ್ ಎಲ್ಲಾ ಸೇರಿ ೫೫೦-೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದು ಮೊದಲು ಜಾರಿಗೆ ಬಂದದ್ದು ೧-೪-೧೯೮೧ ಇದು ಆಗಿ ೪ ವರ್ಷಗಳು ಮುಗಿದಿದೆ. ಇದು ಆದ ನಂತರ ಸನ್ಮಾನ್ಯ ಸದಸ್ಯರು ಫೋಸ್ಟಲ್ ಖರ್ಚಿಗೆ ಜಾಸ್ತಿ ಹಣವನ್ನು ಖರ್ಚು ಮಾಡಬೇಕಾಗಿದೆ. ಅದೇ ರೀತಿ ಟೆಲಿಫೋನ್ ಬಿಲ್ಲಿನ ಹಣ ಕೂಡ ಜಾಸ್ತಿಯಾಗಿದೆ. ಮತ್ತೆ ಸನ್ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡುವುದಕ್ಕೋಸ್ಕರ ಅನೇಕ ಸಲ ತಿರುಗಾಡಬೇಕಾಗುತ್ತದೆ. ಪೆಟ್ರೋಲ್‌ದರ ಕೂಡ ಜಾಸ್ತಿಯಾಗಿದೆ. ಮಾನ್ಯ ಮಂಟೂರ್‌ರವರು ೪ ಸಾವಿರ ರೂಪಾಯಿಗಳ ಟೆಲಿಫೋನ್ ಬಿಲ್ ಬಂತು ಎಂದು ಹೇಳಿದರು. ಅದು ವಿಶೇಷ ಸಂದರ್ಭದಲ್ಲಿ ಆಗಿರಬಹುದು. ಟೆಲಿಫೋನ್ ಬಿಲ್‌ಗಳ ಮೊತ್ತ ಜಾಸ್ತಿಯಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ ಆದ್ದರಿಂದ ೫೫೦ ರೂಪಾಯಿಗಳನ್ನು ಸೇರಿಸಿ ೧೩೦೦ ರೂಪಾಯಿಗಳನ್ನು ಮಾಡತಕ್ಕ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರ ಜೊತೆಗೆ ಈ ತಿದ್ದುಪಡಿ ಏಪ್ರಿಲ್ ಒಂದರಿಂದ ಜಾರಿಗೆ ಬರತಕ್ಕ ವಿಚಾರ ಇದರಲ್ಲಿ ಅಡಕವಾಗಿದೆ. ತಿದ್ದು

ಪಡಿಯನ್ನು ಈಗಾಗಲೇ ತಮಗೆ ಒಪ್ಪಿಸಿದ್ದೇವೆ. ಇದರಲ್ಲಿ ಮೋಟಾರ್ ಕಾರ್ ಮತ್ತು ಮೋಟಾರ್ ಬೈಕ್‌ಗಳನ್ನು ಕೊಂಡುಕೊಳ್ಳುವುದಕ್ಕೆ ಮುಂಗಡ ಕೊಡತಕ್ಕದ್ದನ್ನು ಸಹ ಆಳವಡಿಸಲಾಗಿದೆ. ಸರ್ಕಾರಿ ನೌಕರರಿಗೆ ಯಾವ ರೀತಿ ಸಾಲ ಕೊಡುತ್ತಾರೋ ಅದೇ ರೀತಿ ಮಾನ್ಯ ಸದಸ್ಯರಿಗೆ ಕೂಡ ಮೋಟಾರ್ ಕಾರುಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಹಾಲಿ ಇರತಕ್ಕ ಮತ್ತು ಮಾಜಿ ಸದಸ್ಯರು ತಾವು ಉಪಯೋಗಿಸಿದಂಥ ಕಾರಿಡಿಗೆ ಬಾಡಿಗೆ ಕೊಡದೆ ಬಹಳ ದಿವಸಗಳಿಂದ ಬಾಕಿ ಇಟ್ಟು ಕೊಂಡಿದ್ದಾರೆ ಎಷ್ಟು ಸಾರಿ ಕೇಳಿದರೂ ಕೊಡುವುದಿಲ್ಲ. ಒಬ್ಬ ಮಾಜಿ ಸದಸ್ಯರು ೮ ಸಾವಿರ ರೂಪಾಯಿಗಳ ಬಾಕಿ ಕೊಡ ಬೇಕು. ಅವರ ಹೆಸರನ್ನು ನಾನು ಈಗ ಇಲ್ಲಿ ಹೇಳಬಯಸುವುದಿಲ್ಲ. ಅವರಿಗೆಪತ್ರ ಬರೆದರೆ ಉತ್ತರವೇ ಇಲ್ಲ. ಆದ್ದರಿಂದ ಅದನ್ನು ವಸೂಲ್ಮಾಡುವುದಕ್ಕೆ ಕಾಲಾವಕಾಶ ತೆಗೆದುಕೊಂಡಿದೆ. ಒಟ್ಟಿನಲ್ಲಿ ಮಾನ್ಯ ಸದಸ್ಯರೆಲ್ಲರೂ ಒಕೊರಲಿನಿಂದ ಈ ಶಿದ್ದುಪಡಿ ಮಸೂದೆಗೆ ಒಪ್ಪಿಗೆ ಕೊಡುತ್ತಾರೆಂದು ಭಾವಿಸಿದ್ದೇನೆ. 'ಮೌನಂ ಸಮ್ಮತಿ ಲಕ್ಷಣಂ' ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಪಾಸ್ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಶಾಸಕರ ಸಂಬಳ ಸಾರಿಗೆ ವಿಚಾರದಲ್ಲಿ.....

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಳದಲ್ಲಿ ಎನು ವತ್ಯಾಸವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸರಿ. ೫೫೦ ರೂಪಾಯಿಗಳು ಇದ್ದುದನ್ನು ೧೫೦.....

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ೫೫೦ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಹೆಚ್ಚಾಗ ತಕ್ಕದ್ದು ೭೫೦ ರೂಪಾಯಿಗಳು.

ಶ್ರೀ ಎಸ್. ಬಂಗಾರಪ್ಪ.—ಸೌದು. ಈಗ ಬರತಕ್ಕ ಸಂಬಳ ಸಾರಿಗೆ ಯಾವುದೇ ಸದನದ ಸದಸ್ಯರಿಗೂ ಸಾಕಾಗುವುದಿಲ್ಲವೆಂಬ ಮಾತನ್ನು ನಾನೂ ಒಪ್ಪುತ್ತೇನೆ. ನಿಜ ಹೇಳಬೇಕೆಂದರೆ ನಾನು ೧೯೬೭ರಲ್ಲಿ ಈ ಮನೆಯ ಸದಸ್ಯನಾಗಿ ಆಯ್ಕೆಯಾದಾಗ ೩೫೦ ರೂಪಾಯಿಗಳು ಇತ್ತು. ಆಮೇಲೆ ರಿವೈಸ್ ಆಗುತ್ತಾ ಬಂತು. ಒಬ್ಬ ಶಾಸಕರು ಬರಗಾಲ ಪರಿಸ್ಥಿತಿಯನ್ನು ನೋಡಬೇಕೆಂದು ಹೋದರೆ ಕಾರು ಬಾಡಿಗೆ ಕೊಡುವುದಕ್ಕೆ ಬಹಳ ತೊಂದರೆಯಾಗಿದೆ. ಪೊಸ್ಟಲ್ ಖರ್ಚು, ಟೆಲಿಫೋನ್ ಬಿಲ್ಸ್ ಎಲ್ಲವೂ ಜಾಸ್ತಿಯಾಗಿ ನನಗೆ ತಿಂಗಳಿಗೆ ಒಟ್ಟಾರೆ ಏನು ಹಣ ಬರುತ್ತದೆ ಅದರಿಂದ ಜೀವನ ಮಾಡುವುದಕ್ಕಾಗುವುದಿಲ್ಲ. ಅವನಿಗೆ ಸಂಸಾರ ಕೂಡ ಜೊತೆಗೆ ಇರುತ್ತದೆ. ಈ ತೊಂದರೆಗಳು ಶಾಸಕರಿಗೆ ಇವೆ. ಹಣ ಜಾಸ್ತಿ ಮಾಡುವುದಕ್ಕೆ ಕಾರಣ ಇದೆ ಎಂಬ ಅಭಿಪ್ರಾಯವನ್ನು ಒಪ್ಪುವುದರೂ ಕೂಡ ಈಗಿರತಕ್ಕ ಪರಿಸ್ಥಿತಿಯಲ್ಲಿ ಒಮ್ಮೆಗೆ ೭೫೦ ರೂಪಾಯಿಗಳನ್ನು ಒಪ್ಪುವುತಕ್ಕದ್ದಲ್ಲ. ಆಗಲೇ ವಿಶ್ವಕನ್ನಡ ಸಮ್ಮೇಳನದ ಬಗ್ಗೆ ಹೇಳಿದೆವು. ಮೈಸೂರಿನಲ್ಲಿ ನಡೆಯತಕ್ಕ ಸಮ್ಮೇಳನಕ್ಕೆ ಲಕ್ಷಾಂತರ ರೂಪಾಯಿ ಗಳನ್ನು ಖರ್ಚು ಮಾಡುವುದು ಬೇಡ ಎಂದು ಹೇಳಿದೆವು. ಏತಕ್ಕೆಂದರೆ ಕರ್ನಾಟಕ ರಾಜ್ಯದಲ್ಲಿ ಬರಗಾಲ ಇದೆ. ಬರಗಾಲ ಇಲ್ಲದೆ ಮಳೆ ಬೆಳೆ ಚೆನ್ನಾಗಿದ್ದರೆ ನಾವು ಒಪ್ಪಿಗೆ ಕೊಡಬಹುದಾಗಿತ್ತು, ಬರಗಾಲ ಇರುವುದರಿಂದ ಈ ವಿಚಾರವನ್ನು ಮುಂದಕ್ಕೆ ಹಾಕಿದರೆ ಒಳ್ಳೆಯದಿತ್ತು. ಇಂಥ ಸಂದರ್ಭದಲ್ಲಿ ನಾವು ಹಣವನ್ನು ಜಾಸ್ತಿ ಮಾಡಿಕೊಳ್ಳತಕ್ಕದ್ದು ಒಳ್ಳೆಯದಲ್ಲವೆಂಬುದು ನಮ್ಮ ಪಕ್ಷದ ಸ್ಪಷ್ಟವಾದ ಅಭಿಪ್ರಾಯ. ಪರಿಸ್ಥಿತಿ ಚೆನ್ನಾಗಿದ್ದರೆ ಒಪ್ಪಬಹುದಾಗಿತ್ತು. ಕಾರಿಗೆ ಅಡ್ವಾನ್ಸ್ ಕೊಡತಕ್ಕ ವಿಚಾರವನ್ನು ಇಟ್ಟಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರಿ ನೌಕರರಿಗೆ ಯಾವ ರೀತಿ ಕೂಡತಕ್ಕ ವ್ಯವಸ್ಥೆ ಇದೆ ಅದೇ ರೀತಿ ಕೊಡುತ್ತೇವೆ. ಅದನ್ನು ರೂಲ್ಸ್‌ನಲ್ಲಿ ಸ್ಪೆಸಿಫೈ ಮಾಡುತ್ತೇವೆ. ಇದರಲ್ಲಿ ಮಾಡಿಲ್ಲ ಪಂಜಾಬಿ ನಲ್ಲಿ ಒಂದು ಲಕ್ಷ ೮೫ ಸಾವಿರ ರೂಪಾಯಿಗಳನ್ನು ಕೊಡತಕ್ಕದ್ದು ಇದೆ. ಅದನ್ನು ರೂಲ್ಸ್‌ನಲ್ಲಿ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ತಾವು ಕಾರಿಗೆ ಅಡ್ವಾನ್ಸ್ ಕೊಡತಕ್ಕ ವಿಚಾರದಲ್ಲಿ ಹೇಳುವುದಾದರೆ, ಕೊಡುವ ಹಾಗೆ ಇದ್ದರೆ ಜಾಸ್ತಿ ಕೊಡಿ. ಕೇವಲ ೩೫೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಪುನಃ ಫೈನಾನ್ಸ್ ಕಾರ್ಪೊರೇಷನ್‌ನಿಂದ ಮತ್ತೊಂದರಿಂದ ಸಾಲ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಬರಬಹುದು. ಸದಸ್ಯರಿಗೆ ಕಾರು ತೆಗೆದುಕೊಳ್ಳತಕ್ಕ ಅವಶ್ಯಕತೆ ಇದೆ. ಅವರು ತಮ್ಮ ಕ್ಷೇತ್ರದಲ್ಲಿ ಪ್ರವಾಸ ಮಾಡ ಬೇಕಾಗುತ್ತದೆ, ಬಾಡಿಗೆ ಕಾರು ತೆಗೆದುಕೊಂಡರೆ ಬಾಡಿಗೆ ಕೊಡುವುದರಲ್ಲಿ ಸುಸ್ತಾಗುತ್ತಾರೆ. ಆದರೆ ಹಣ ಕೊಡತಕ್ಕ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದ ಪರಿಸ್ಥಿತಿ ಚೆನ್ನಾಗಿಲ್ಲ. ೧೭ ಜಿಲ್ಲೆಗಳಲ್ಲಿ ಬರಗಾಲ ಇಲ್ಲದಿದ್ದರೆ ಈ ಮಾತನ್ನು ಒಪ್ಪಬಹುದಾಗಿತ್ತು. ಅಡ್ವಾನ್ಸ್ ಇರಬಹುದು,

ಸಂಬಳ ಜಾಸ್ತಿ ಮಾಡುವುದು ಇರಬಹುದು. ಇದು ಈ ಮನೆಯ ಮತ್ತು ಆ ಮನೆಯ ಸದಸ್ಯರಿಗೆ ಸಂಬಂಧಪಟ್ಟ ಹಾಗೆ ಒಂದು ಲಕ್ಷ ೨೯ ಸಾವಿರ ರೂಪಾಯಿಗಳ ಖರ್ಚು ಬರತಕ್ಕ ವಿಧೇಯಕ. ಬರಗಾಲ ಜಾಸ್ತಿ ಇರತಕ್ಕ ಸಂದರ್ಭದಲ್ಲಿ ಈ ಮಸೂದೆಯನ್ನು ತರತಕ್ಕದ್ದು ಒಳ್ಳೆಯದಲ್ಲವೆಂದು ಹೇಳಿ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಧೇಯಕದ ಬಗ್ಗೆ ಚಿಂತನೆ ಮಾಡತಕ್ಕ ಸಮಯದಲ್ಲಿ ಇದಕ್ಕೆ ಸ್ವರೂಪ ಕೊಡುವುದಕ್ಕೆ ಮುಂಚೆ ವಿರೋಧ ಪಕ್ಷದ ನಾಯಕರನ್ನು ಕಂಡು ಮಾತನಾಡಿದ್ದೇನೆ ಅವರು ಈ ಮಾತನ್ನು ಹೇಳಿದ್ದಕ್ಕೋಸ್ಕರ ಹೇಳುತ್ತಿದ್ದೇನೆ ಅದೇ ರೀತಿ ಬಿಜೆಪಿ, ಸಿಪಿಐ, ಮತ್ತು ಸಿಪಿಎಂ ಸ್ನೇಹಿತರೊಡನೆಯೂ ಮಾತನಾಡಿದ್ದೇನೆ. ಅವರೆಲ್ಲರೂ ಒಮ್ಮತ ಇದ್ದರೆ ಮಾಡೋಣವೆಂದು ಹೇಳಿದರು. ಇದರಲ್ಲಿ ಖರ್ಚಾಗತಕ್ಕದ್ದು ನಿಜವೆಂದು ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರು ಸ್ನೇಹಿತರನ್ನು ಕೇಳಿ ಹೇಳುತ್ತೇನೆಂದು ಹೇಳಿದರು. ಮತ್ತೆ ಕೇಳಿದಾಗ ನಾವು ಇದನ್ನು ವಿರೋಧಿಸುವುದೂ ಇಲ್ಲ, ಸ್ವಾಗತಿಸುವುದೂ ಇಲ್ಲವೆಂದು ಹೇಳಿದರು. ಅದಕ್ಕೋಸ್ಕರ ಹೇಳಿದ್ದು 'ಮೌನಂ ಸಮ್ಮತಿ ಲಕ್ಷಣಂ' ಎಂದು ಈಗ ಸಮಯ ಸರಿಯಾಗಿಲ್ಲ, ಇದಕ್ಕೆ ನಮ್ಮ ವಿರೋಧ ಇದೆ ಎಂದರೆ ನಾನು ಈ ಮಸೂದೆಯನ್ನು ಪಾಸ್ ಮಾಡಿಕೊಡಿ ಎಂದು ಒತ್ತಾಯ ಮಾಡುವುದಿಲ್ಲವೆಂದು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ.

ಶ್ರೀ ಎ. ಲಕ್ಷ್ಮೀಸಾಗರ್.—ಇದೆರ ಅಗತ್ಯತೆ ಇದೆ ಎಂಬ ವಾದವನ್ನು ಇಟ್ಟಿದ್ದಾರೆ. ಸನ್ಮಾನ್ಯ ಸದಸ್ಯರು ಪರಿಣಾಮಕಾರಿಯಾಗಿ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಮಾಡುವುದಕ್ಕೆ ತಮ್ಮ ಕ್ಷೇತ್ರದಲ್ಲಿ ತಿರುಗಾಡಬೇಕಾಗಿದೆ. ಆದ್ದರಿಂದ ವಾಹನಗಳ ಅಗತ್ಯ ಇದೆ ಎಂದು ಹೇಳಿದ್ದಾರೆ. ಪೆಟ್ರೋಲ್ ಖರ್ಚು ಜಾಸ್ತಿಯಾಗುತ್ತದೆಂಬ ಮಾತನ್ನು ಒಪ್ಪಿಕೊಂಡಿದ್ದಾರೆ. ಟೆಲಿಫೋನ್ ಬಿಲ್ ಜಾಸ್ತಿಯಾಗಿದೆ. ಪೋಸ್ಟಲ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆ, ಎಲ್ಲಾ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ಈ ಬರಗಾಲದಲ್ಲೂ ತೆರರ ಆವಶ್ಯಕತೆ ಏತಕ್ಕೆ ಇದೆ ಎಂದು ಹೇಳುತ್ತೆನೆಂದರೆ ಈ ಮನೆಯ ಮತ್ತು ಮೆಂಬ್ಲನೆಯ ಸದಸ್ಯರು ಅಡ್ಡಾಡಬೇಕಾದರೆ, ಜನರಿಗೆ ಅನುಕೂಲತೆಗಳು ಮುಟ್ಟಿವೆಯೇ ಇಲ್ಲವೇ ಎಂಬುದನ್ನು ನೋಡಬೆಕಾದರೆ ವಾಹನಗಳು ಬೆಕಾಗುತ್ತವೆ. ಈ ಸಂದರ್ಭದಲ್ಲಿ ನಾನು ಕೆಲವು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೆನೆ. ಈ ವರ್ಷ ಮಹರಾಷ್ಟ್ರದಲ್ಲೂ ಹೆಚ್ಚು ಮಾಡಿದ್ದಾರೆ. ಫೋನ್ ಬಿಲ್ಸ್‌ಗೆ ೪೫೦ ರೂಪಾಯಿಗಳು ಇದ್ದುದನ್ನು ೬೦೦ ರೂಪಾಯಿಗಳನ್ನು ತಿಂಗಳಿಗೆ ಮಾಡಿದ್ದಾರೆ ಸ್ಟೇಷನರಿ ಖರ್ಚು ತಿಂಗಳಿಗೆ ೧೦೦ ರೂಪಾಯಿಗಳು ಮಾಡಿದ್ದಾರೆ ಅಲ್ಲಿ ಪ್ರತಿಯೊಬ್ಬ ಶಾಸಕನಿಗೂ ಆಪ್ತ ಸಹಾಯಕನನ್ನು ಇಟ್ಟುಕೊಳ್ಳುವುದಕ್ಕೆ ವ್ಯವಸ್ಥೆ ಇದೆ. ಅದಕ್ಕೆ ೭೦೦ ರೂಪಾಯಿಗಳನ್ನು ಮಾಡಿದ್ದಾರೆ. ಸಿಟ್ಟಿಂಗ್ ಫೀಸ್ ೫೦ ರೂಪಾಯಿಗಳಿಂದ ೭೫ ರೂಪಾಯಿಗಳು ಮಾಡಿದ್ದಾರೆ. ಹೊರಗಡೆ ರೈಲಿನಲ್ಲಿ ಹೋದರೆ ೨೦ ಸಾವಿರ ಕಿಲೋಮೀಟರ್ ವರೆಗೆ ಒಂದು ವರ್ಷಕ್ಕೆ ಓಡಾಡುವುದಕ್ಕೆ ಅವಕಾಶವಿದೆ. ರಾಜ್ಯದ ಒಳಗಡೆ ಯಾವ ಮಿತಿಯೂ ಇಲ್ಲ. ಆಮೇಲೆ ಅವರ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಕೆಲವು ದಿನಗಳವರೆಗೆ ಉಚಿತವಾಗಿ ಕಾರುಕೊಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಪೆನ್‌ಷನ್ ಕೊಡುತ್ತಾರೆ. ಆಂಧ್ರ ಪ್ರದೆ ಶದಲ್ಲಿ ಹೆಚ್ಚುಕಡಿಮೆ ಇದೆ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಕಾನ್‌ಸ್ಟಿಟುಯೆನ್ಸಿ ಅಲೊ ಯನ್ಸ್‌ನ್ನು ೪೫೦ ರೂಪಾಯಿಗಳಿಂದ ೧೦೦೦ ರೂಪಾಯಿಗಳಿಗೆ ಹೆಚ್ಚು ಮಾಡಿ ಇತ್ತೀಚೆಗೆ ಶಾಸನವನ್ನು ಪಾಸ್ ಮಾಡಿದ್ದಾರೆ ಮಹರಾಷ್ಟ್ರದಲ್ಲಿ ಸಿಕ್ಕಿಂನಲ್ಲಿ ಕೂಡ ಮಾಡಿದ್ದಾರೆ. ಪಂಜಾಬಿನಲ್ಲಿ ಕಾರ್ ಮತ್ತು ಹೌಸ್ ಬಿಲ್ಡಿಂಗ್ ಅಲೋಯೆನ್ಸ್ ವ್ಯವಸ್ಥೆ ಇದೆ. ''ಲೆಜಿಸ್ಲೇಟರ್ಸ್ ಇನ್ ಇಂಡಿಯಾ'' ಎಂದು ಲೋಕಸಭೆಯ ರು ಪ್ರುಚುರಪಡಿಸಿರುವ ಪುಸ್ತಕ ಇದು. ಇದರಲ್ಲಿ ಎಲ್ಲಾ ವಿವರಗಳೂ ಇವೆ. ಲೆಟೆಸ್ಟ್ ಇನ್‌ಫರ್ಮೇಷನ್ ತರಿಸಿದ್ದೇನೆ. ಪಂಜಾಬಿನಲ್ಲಿ ಮನೆ ಕಟ್ಟಿಸುವುದಕ್ಕೆ ೧ ಲಕ್ಷ ೨೫ ಸಾವಿರ ರೂಪಾಯಿಗಳ ಲೋನ್ ಕೊಡುತ್ತಿದ್ದಾರೆ ಕಾರ್ ಅಥವಾ ಜೀಪ್ ಕೊಂಡುಕೊಳ್ಳುವುದಕ್ಕೆ ೮೫ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ ಅದೇ ರೀತಿ ಹಿಮಾಚಲಪ್ರದೇಶದಲ್ಲಿ ಕೆಲವು ಅನುಕೂಲಗಳನ್ನು ಕೊಡುತ್ತಿದ್ದಾರೆ ಸಿಕ್ಕಿಂನಲ್ಲಿ ಸ್ಯಾಲರಿ ಕೊಡುತ್ತಾ ಇರತಕ್ಕದ್ದು ೮೦೦ ರೂಪಾಯಿಗಳು ನಾವು ಇನ್ನೂ ೭೦೦ ರೂಪಾಯಿ

ಗಳನ್ನು ಕೊಡುತ್ತಿದ್ದೇವೆ. ಇದು ಬರಗಾಲ ಆಗಿರುವುದು ನಿಜ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈ ಸಮಯದಲ್ಲೂ ಸನ್ಮಾನ್ಯ ಸದಸ್ಯರು ಎಪೆಕ್ಟೀವಾಗಿ ಕೆಲಸ ಮಾಡಬೇಕಾದರೆ ಅವರಿಗೆ ಕನಿಷ್ಠ ಮಟ್ಟದ ಈ ಅನುಕೂಲವಾದರೂ ಇರಲೇಬೇಕು ಎಂಬ ವಾದವನ್ನು ವಿನಮ್ರವಾಗಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಸ್ವಾಗತ ಮಾಡದೇಹೋದರೂ ಚಿಂತೆಯಿಲ್ಲ. ವಿರೋಧ ಮಾಡುತ್ತೆ ಪೆ ಎಂದು ಹೇಳಿದ್ದಾರೆ. ಅದಕೋಸ್ಕರ ನಾನು ಇದನ್ನು ಪಾಪಸ್ ತೆಗೆದುಕೊಳ್ಳುತ್ತೇನೆ. ಪ್ರೆಸ್ ಮಾಡುವುದಿಲ್ಲ.

ಶ್ರೀ ಕೆ. ಪೆಚ್. ಪಾಟೀಲ್.—ಇದನ್ನು ಪಕ್ಷದ ವಿಷಯವಾಗಿ ನಮ್ಮಲ್ಲಿ ಇಟ್ಟುಕೊಂಡಿಲ್ಲ ಎಂಬ ವಿಷಯವನ್ನು ಹೇಳಿದ್ದಾರೆ. ವಿರೋದಪಕ್ಷದ ನಾಯಕರು ಏನು ಹೇಳಿದರೆಂದರೆ ಈಗ ಬರಗಾಲ ಇರುವುದರಿಂದ ಸ್ವಲ್ಪ ದಿನ ಇದನ್ನು ಮುಂದಕ್ಕೆ ಹಾಕಿ ಎಂದು ಹೇಳಿದ್ದಾರೆ. ಶಾಸಕರು ಲಂಚದಿಂದ ದೂರ ಇರಬೇಕು, ಯಾರ ಕಡೆಯಿಂದಲೂ ರೊಕ್ಕ ತೆಗೆದುಕೊಳ್ಳಬಾರದು ಎಂಬ ಮಾತನ್ನು ಎಲ್ಲರೂ ಒಪ್ಪುತ್ತೇವೆ. ಬಡವರಾಗಿರತಕ್ಕ ಶಾಸಕರು ಏನು ಮಾಡಬೇಕು ಎಂಬ ಪ್ರಶ್ನೆ ಬರುತ್ತದೆ. ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಹೆಚ್ಚಿನ ವ್ಯವಸ್ಥೆ ಕೊಡಲೇಬೇಕು ಆ ದೃಷ್ಟಿಯಿಂದ ಪೆಚ್ಚಿಗೆ ಸರಬಿಲ್ ಕೊಟ್ಟಿದ್ದು ತಪ್ಪು ಎಂದು ಹೇಳುವುದಿಲ್ಲ. ಬರಗಾಲ ಇರುವುದರಿಂದ ಮುಂದೆ ಹಾಕಿ ಎಂದು ಹೇಳುತ್ತಿದ್ದಾರೆ. ಈಗ ಸೌಲಭ್ಯಗಳನ್ನು ಹೆಚ್ಚು ಮಾಡುವುದರ ಜೊತೆಗೆ ಇನ್ನೂ ಕೆಲವು ಸಲಹೆಗಳನ್ನು ಕೊಡುತ್ತೇನೆ. ಈಸೌಕರ್ಯಗಳನ್ನು ಕೆಲಸ ಮಾಡುವುದಕ್ಕೆ ಕೊಟ್ಟಿದ್ದೀರಿ ನಾನು ಪತ್ರವ್ಯವಹಾರ ನಡೆಸುವುದಕ್ಕೆ ತಿಂಗಳಿಗೆ ಮೂರುನೂರು ಅಥವಾ ನಾಲ್ಕುನೂರು ರೂಪಾಯಿಗಳು ಬೇಕಾಗುತ್ತದೆ. ಪತ್ರಗಳನ್ನು ಟಪಾಲಿಗೆ ಹಾಕುವುದಕ್ಕೆ ಹೋಗಬೇಕಾಗುತ್ತದೆ ಏನಾದರೂ ಮಂತ್ರಿಗಳಿಗೆ ಪತ್ರಗಳನ್ನು ಕಳುಹಿಸಬೇಕು ಎಂದರೆ ನಮ್ಮಲ್ಲಿ ಸಿಪಾಯಿ ಇರುವುದಿಲ್ಲ. ಪಾರ್ಲಿಮೆಂಟಿನಲ್ಲಿ ಒಂದು ಬಾಕ್ಸ್ ಮಾಡಿದ್ದಾರೆ. ಅಲ್ಲಿ ಎಲ್ಲಾ ಸದಸ್ಯರೂ ಪತ್ರಗಳನ್ನು ತಂದುಹಾಕುತ್ತಾರೆ. ಅಲ್ಲಿಂದ ಅವರು ಎಲ್ಲಾ ಮಂತ್ರಿಗಳಿಗೆ ಮುಟ್ಟಿಸುವಂಥ ವ್ಯವಸ್ಥೆಯನ್ನು ಪುಕ್ಕಟೆಯಾಗಿ ಮಾಡಿದ್ದಾರೆ. ಆದೇರೀತಿ ಇಲ್ಲಿ ಅನುಕರಣೆ ಮಾಡಿ. ಇದಕ್ಕೇನಾದರೂ ಇದರಲ್ಲಿ ಶಿದ್ದುಪಡಿ ಮಾಡುತ್ತೀರಾ ನೋಡಿ ಅಲ್ಲಿ ಒಂದು ಪೂಲ್ ಆಫ್ ಟೈಪಿಸ್ಟ್ ಮಾಡಿದ್ದಾರೆ. ಟೈಪ್ ಮಾಡುವವರನ್ನು ಮತ್ತು ತಿದ್ದುವವರನ್ನು ಇಟ್ಟಿದ್ದಾರೆ. ೪೦–೫೦ ಟೈಪ್ ರೈಟರ್‌ಗಳು ಇರುತ್ತವೆ. ಇಲ್ಲಿ ಆಷ್ಟಾಗದಿದ್ದರೂ ೧೦ ಮಂದಿ ಟೈಪಿಸ್ಟ್ ಮತ್ತು ಸ್ಟೆನೋಗಳನ್ನು ಇಡಬೇಕು. ನಾವು ಡಿಕ್ಟೇಟ್ ಮಾಡಿದರೆ ತೆಗೆದುಕೊಂಡು ಟೈಪ್ ಹೊಡೆದು ಸಹಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರಿಂದ ಸಾರ್ವಜನಿಕರ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಮಾನ್ಯ ಮಂಟೂರ್ ಅವರು ಹೇಳಿದ ಸಲಹೆ ಯೋಗ್ಯ ವಾದುದು ಟೆಲಿಫೋನ್ ಬಿಲ್‌ಗಳು ಸಾವಿರಾರು ರೂಪಾಯಿಗಳಾಗುತ್ತವೆ, ಮೂರು ತಿಂಗಳಿಗೆ ೨೫೦ ರೂಪಾಯಿಗಳನ್ನು ಕೊಟ್ಟರೆ ಸಾಕಾಗುವುದಿಲ್ಲ. ಟೆಲಿಫೋನ್ ಬಿಲ್ ಎಷ್ಟು ಬಂದರೂ ಶಾಸಕರಿಗೆ ಹಣಕೊಡಬೇಕು ಇಲ್ಲದಿದ್ದರೆ ಅರ್ಧ ಆದರೂ ಕೊಡಿ ಟೆಲಿಫೋನ್ ಮಾಡಿ ಕೆಲಸ ಮಾಡಿಸುವುದಾದರೆ ಅಭಿನಂದನೆ ಮಾಡೋಣ. ಅದಕ್ಕೆ ಹೆಚ್ಚು ಖರ್ಚಾದರೂ ನಮ್ಮ ವಿರೋಧಪಕ್ಷದ ನಾಯಕರ ಅಭ್ಯಂತರ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹೇಳಲಿಲ್ಲವಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಅವರು ಏನು ಹೇಳಿದ್ದಾರೆಂದರೆ ಬರ ಇರುವುದರಿಂದ ಇದನ್ನು ಮುಂದಕ್ಕೆಹಾಕಿ ಎಂದು ಹೇಳಿದ್ದಾರೆ. ಬರಗಾಲಕ್ಕೆ ಸಾಕಷ್ಟು ಪರಿಹಾರ ಬರುತ್ತದೆ. ಒಂದು ಸಾವಿರ ರೂಪಾಯಿಯಿಂದ ಯಾರ ಹೊಟ್ಟೆಯೂ ತುಂಬುವುದಿಲ್ಲ ಆ ದೃಷ್ಟಿಯಿಂದ ಏನು ಈಗ ಹೆಚ್ಚು ಮಾಡಿದ್ದೀರಿ ಇದರ ಜೊತೆಗೆ ನಾನು ಹೇಳಿದ ಈ ಸೌಕರ್ಯಗಳನ್ನೂ ಕೊಡಿ. ಶಾಸಕರು ಇದರಿಂದ ಹೆಚ್ಚು ಕೆಲಸ ಮಾಡಿ ಸಾರ್ವಜನಿಕ ಹಿತ ಆಗುತ್ತದೆ. ಕ್ಷೇತ್ರದ ಕೆಲಸವಾಗುತ್ತದೆ. ಇಂಥದ್ದನ್ನು ಮಾಡುವುದಕ್ಕೆ ಲಕ್ಷ್ಮೀಸಾಗರ್ ಅವರು ಮುಂದಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾನ್ಯ ಸದಸ್ಯರು ಹೇಳಿದ್ದಾರೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ಮಂತ್ರಿಗಳೇನಿದ್ದಾರೆ ಅವರ ಸಂಬಳ ಹೆಚ್ಚು ಮಾಡಬೇಕು ಕಾರಣವೆಂದರೆ ಇವತ್ತು ಒಂದು ರೂಪಾಯಿನ ಬೆಲೆ ೧೩ ಪೈಸೆ ಆಗಿದೆ. ಒಂದು ಸಾವಿರ ರೂಪಾಯಿ ಕೊಟ್ಟರೆ ೧೩೦ ರೂಪಾಯಿ ಕೊಟ್ಟಂತಾಗುತ್ತದೆ. ೨ ಸಾವಿರ ರೂಪಾಯಿಗಳನ್ನು ಕೊಟ್ಟರೆ ೨೬೦ ರೂಪಾಯಿಗಳನ್ನು ಕೊಟ್ಟಂತಾಗುತ್ತದೆ. ೧೬೫೦ ರೂಪಾಯಿಗಳನ್ನು ಮಂತ್ರಿಗಳಿಗೆ ಕೊಟ್ಟು ೨೪ ಗಂಟೆ ಕೆಲಸ ಮಾಡು ಎಂದು ಹೇಳುವುದು ಧರ್ಮ ಅಲ್ಲ. ಕನಿಷ್ಪಪಕ್ಷ ಕ್ಯಾಬಿನೆಟ್ ಮಂತ್ರಿಗಳಿಗೆ ಮೂರು ಸಾವಿರ ರೂಪಾಯಿಗಳಿಗಿಂತ ಕಡಿಮೆ ಕೊಡಲೇ ಬಾರದು. ರಾಜ್ಯ ಮಂತ್ರಿಗಳಿಗೆ ಎರಡೂವರೆ ಸಾವಿರಕ್ಕಿಂತ ಕಡಿಮೆ ಕೊಡಬಾರದು ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆಂದರೆ.....

ಅಧ್ಯಕ್ಷರು.—ಇದನ್ನು ಏನು ಮಾಡಬೇಕು ಹೇಳಿ. ಪಾಸ್ ಮಾಡಬೇಕೇ ?

ಶ್ರೀ ಬಿ. ಬಸವಲಿಂಗಪ್ಪ.—ಹೌದು ಮಾಡಬೇಕು.

ಅಧ್ಯಕ್ಷರು.—ಎಲ್ಲರ ಅಭಿಪ್ರಾಯವೂ ಆ ಕಡೆ ಮತ್ತು ಈ ಕಡೆ ಪಾಸ್ ಮಾಡಬೇಕು ಎಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಕೆ. ಎಚ್. ಪಾಟೀಲರು ಕೆಲವು ಸಲಹೆಸೂಚನೆಗಳನ್ನು ಕೊಟ್ಟಿದ್ದಾರೆ. ನನ್ನ ಲೆಕ್ಕಾಚಾರದಲ್ಲಿ ಈಗ ಹೆಚ್ಚು ಮಾಡಿರುವ ಹಣವೂ ಕಡಿಮೆಯೆಂಬ ತಿಳುವಳಿಕೆ ನನಗಿದೆ ನನ್ನ ಒಬ್ಬನ ದೃಷ್ಟಿಯಿಂದ ನಾನು ಮಾತನಾಡುವುದಿಲ್ಲ. ನನಗೆ ಇಷ್ಟೂ ಬೇಕಾಗಿಲ್ಲ. ಆದರೆ ಸರ್ವೇಸಾಮಾನ್ಯವಾಗಿ ಪರಿಣಾಮಕಾರಿಯಾಗಿ ಶಾಸಕರು ಕೆಲಸ ಮಾಡಬೇಕಾದರೆ ಅವರು ಆಡ್ಡಾಡ ಬೇಕಾಗುತ್ತದೆ. ಅದಕ್ಕೆ ಹಣ ಖರ್ಚು ಮಾಡಲೇ ಬೇಕಾಗುತ್ತದೆ. ಆದ್ದರಿಂದ ಇದು ಅತ್ಯಾವಶ್ಯಕವಾದ ಕನಿಷ್ಠ ಪ್ರಮಾಣದ ಹೆಚ್ಚಳ ಎಂದು ಹೇಳುತ್ತೇನೆ. ಬೇರೆ ರಾಜ್ಯಗಳಿಗೆ ಹೋಲಿಸಿದರೂ ನಮ್ಮದು ಕಡಿಮೆ ಇದೆ ಎಂಬ ದೃಷ್ಟಿಯಿಂದ ಕೆಲವು ಉದಾಹರಣೆಗಳನ್ನು ಕೊಟ್ಟೆ. ಮಹರಾಷ್ಟ್ರದಲ್ಲಿ ಈಗ ಹೆಚ್ಚು ಮಾಡಿದ್ದಾರೆ ಪೆಟ್ರೊಲ್ ಬೆಲೆ ಪೋಸ್ಟಲ್ ಬೆಲೆ ಎಲ್ಲಾ ಜಾಸ್ತಿಯಾಗಿದೆ. ಓಡಾಡತಕ್ಕ ಪ್ರಯಾಣದ ವೆಚ್ಚವೂ ಜಾಸ್ತಿಯಾಗಿದೆ. ಇದು ಅತ್ಯಾವಶ್ಯಕವಾದುದರಿಂದ ತಾವು ಸ್ವಾಗತ ಮಾಡಿ ದ್ದೀರಿ ಅದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ಬರಗಾಲ ಇರಬಹುದು. ಹಲವಾರು ದಿನಗಳ ಕಾಲ ದೀರ್ಘವಾಗಿ ಯೋಚನೆ ಮಾಡಿ ಈ ಕನಿಷ್ಠ ಪ್ರಮಾಣದ ಹೆಚ್ಚಳವನ್ನು ಮಾಡುವು ದಕ್ಕೆ ಹೊರಟಿದ್ದೇವೆ. ಈಗಲಾದರೂ ಸದಸ್ಯರೆಲ್ಲರೂ ಒಪ್ಪಿಕೊಂಡಿದ್ದಾರೆಂದು ಭಾವಿಸುತ್ತೇನೆ. ಆದ್ದರಿಂದ ಇದನ್ನು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಪರ್ಯಾಲೋಚನಾ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ :

"೧೯೮೫ ನೇ ಇಸವಿಯ ಕರ್ನಾಟಕ ವಿಧಾನ ಮಂಡಲ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳ (ತಿನ್ನೇ ತಿನ್ನುಪಡಿ) ವಿಧೇಯಕಕ್ಕೆ ಅನುಮೋದನೆ ನೀಡುವುದು".

ಪ್ರಸ್ತಾವ ಅಂಗೀಕೃತವಾಯಿತು

ಖಂಡ - ೨

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಒಂದು ತಿದ್ದುಪಡಿ ಇದೆ. In sub-clause 2, the following shall be substituted:

"It shall be deemed to have come into force on 1st April 1985."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಅದು ಹೀಗಿದೆ. In sub-clause 2, the following shall be substituted:

"It shall be deemed to have come into force on 1st April 1985."

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು ಮತ್ತು ಎರಡನೆಯ ಖಂಡವು ವಿಧೇಯಕದ

ಅಂಗವಾಯಿತು

SRI A. LAKSHMI SAGAR.—Sir, I move the following amendment.

"In Clause 2, for the words "One thousand rupees" the words "One thousand three hundred rupees" shall be subsistuted."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿಯನ್ನು ಸಭೆಯು ಮತಕ್ಕೆ ಹಾಕುತ್ತೇನೆ. ಅದು ಹೀಗಿದೆ :

"In Clause 2, for the words "One thousand rupees", the words "One thousand three hundred rupees" shall be substituted."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೩

ಅಧ್ಯಕ್ಷರು.—"ಖಂಡ ೩ ವಿಧೇಯಕದ ಅಂಗವಾಗಿರುತ್ತೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೩ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪದ ಅಂಗೀಕಾರ

SRI A. LAKSHMI SAGAR.—Sir, I beg to move that,

"The Karnataka Legislature salaries, pensions and Allowance (Third Amendment) Bill, 1985, (as amended) be passed."

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ:

"ಗೌರವನೀಯ ಇಸವಿಯ ಕರ್ನಾಟಕ ವಿಧಾನ ಮಂಡಲ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

The Karnataka Zilla Parishads Taluk Panchayath Samithis Mandal Panchayaths and Nyaya Panchayats (Amendment) Bill, 1985.

Motion to Consider

SRI B.R. YAVAGAL (Minister of State for Rural Development and Panchayath Raj).—Sir, I beg to move that :